# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ಚೌಕ, ಬೆಂಗಳೂರು-560 002**

**ಪತ್ರಿಕಾ ಪ್ರಕಟಣೆ** **ದಿನಾಂಕ:31.03.2020**

## ಸೋಂಕು ನಿವಾರಕ ಸಿಂಪಡಣೆಗೆ ಹ್ಯಾಂಡ್‌ಕಾರ್ಟ್ ಸ್ಪ್ರೇಯರ್ ನೀಡುವ ಬಗ್ಗೆ:




ಕೋರೋನಾ ವೈರೆಸ್ ಸೋಂಕು ತಡೆಗಟ್ಟುವ ಹಿನ್ನೆಲೆಯಲ್ಲಿ ನಗರಾದ್ಯಂತ ಸೋಂಕು ನಿವಾರಕ ಸಿಂಪಡಣೆ ಮಾಡಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ರತ್ನಗಿರಿ ಇಂಪೆಕ್ಸ್ ಪ್ರೈ.ಲಿ. ಸಂಸ್ಥೆಯು ಸ್ವಯಂ ಪ್ರೇರಿತವಾಗಿ ಪಾಲಿಕೆಗೆ 200 ಹ್ಯಾಂಡ್‌ಕಾರ್ಟ್ ಸ್ಪ್ರೇಯರ್(ಕೈಬಂಡಿ ಸಿಂಪಡಿಸುವ ಯಂತ್ರ)ಗಳನ್ನು ಉಚಿತವಾಗಿ ನೀಡುತ್ತಿದ್ದು, ಪಾಲಿಕೆ ಕೇಂದ್ರ ಕಛೇರಿ ಸಭಾಂಗಣ-01ರಲ್ಲಿ ಸಾಂಕೇತಿಕವಾಗಿ ಒಂದು ಯಂತ್ರವನ್ನು ಇಂದು ಪೂಜ್ಯ ಮಹಾಪೌರರು ಸ್ವೀಕರಿಸಿದರು. ಈ ವೇಳೆ ಆಡಳಿತ ಪಕ್ಷದ ನಾಯಕರು ಶ್ರೀ ಮುನೀಂದ್ರ ಕುಮಾರ್, ಜ.ಡಿ.ಎಸ್ ಪಕ್ಷದ ನಾಯಕರು ಶ್ರೀಮತಿ ನೇತ್ರಾ ನಾರಾಯಣ್, ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಅಧ್ಯಕ್ಷರು ಶ್ರೀ ಮಂಜುನಾಥ ರಾಜು ಹಾಗೂ ಇತರೆ ಅಧಿಕಾರಿಗಳು ಉಪಸ್ಥಿತರಿದ್ದರು.

ಕೋರೋನಾ ವೈರೆಸ್ ಸೋಂಕು ತಡೆಗಟ್ಟುವ ಹಿನ್ನೆಲೆಯಲ್ಲಿ ರತ್ನಗಿರಿ ಇಂಪೆಕ್ಸ್ ಪ್ರೈ.ಲಿ. ಸಂಸ್ಥೆಯು ಸ್ವಯಂ ಪ್ರೇರಿತವಾಗಿ ಪಾಲಿಕೆಗೆ 200 ಹ್ಯಾಂಡ್‌ಕಾರ್ಟ್ ಸ್ಪ್ರೇಯರ್‌ಗಳನ್ನು ಉಚಿತವಾಗಿ ನೀಡುತ್ತಿದ್ದು, ಅದನ್ನು ಎಲ್ಲಾ 198 ವಾರ್ಡ್‌ಗಳಿಗೆ ಹಂಚಿಕೆ ಮಾಡಲಾಗುವುದು ಎಂದು ಮಹಾಪೌರರು ತಿಳಿಸಿದರು.

ಹ್ಯಾಂಡ್‌ಕಾರ್ಟ್ ಸ್ಪ್ರೇಯರ್ ಯಂತ್ರವು 12ಲೀಟರ್ ಸಾಮರ್ಥ್ಯ ಹೊಂದಿದ್ದು, ಅದನ್ನು ಒಂದು ಬಾರಿ ಪಂಪ್ ಮಾಡಿದರೆ ಸಾಕು ಸೋಂಕು ನಿವಾರಕ ಮುಗಿಯುವವರೆಗೆ ಸಿಂಪಡಣೆ ಮಾಡಬಹುದಾಗಿದೆ. ಒಬ್ಬ ಸಿಬ್ಬಂದಿ ಯಂತ್ರದ ಕಾರ್ಯನಿರ್ವಹಣೆ ಬಗ್ಗೆ ಮಾಹಿತಿ ಪಡೆದು ಸುಲಭವಾಗಿ ನಿರ್ವಹಣೆ

ಮಾಡಬಹುದಾಗಿದೆ. ಕೊಳಗೇರಿ ಪ್ರದೇಶ, ಚಿಕ್ಕ-ಚಿಕ್ಕ ರಸ್ತೆಗಳಿರುವ ಪ್ರದೇಶಗಳಲ್ಲಿ ಸಿಂಪಡಣೆ ಮಾಡಲು ಹೆಚ್ಚು ಅನುಕೂಲಕರವಾಗಿದೆ. ಇಂದು ಸಾಂಕೇತಿಕವಾಗಿ ಒಂದು ಯಂತ್ರವನ್ನು ನೀಡಿದ್ದು, ಉಳಿದ 199 ಯಂತ್ರಗಳನ್ನು ನಾಳೆ ನೀಡಲಿದ್ದಾರೆ. ಆ ಬಳಿಕ ಎಲ್ಲಾ 198 ವಾರ್ಡ್‌ಗಳಿಗೆ ಒಂದೊಂದು ಯಂತ್ರವನ್ನು ಹಂಚಿಕೆ ಮಾಡಲಾಗುವುದು.

ಇಂತಹ ಸಮಯದಲ್ಲಿ ಉದಾರತೆಯನ್ನು ತೋರಿ ಉಚಿತವಾಗಿ ವಿತರಣೆ ಮಾಡಲು ಮುಂದಾದ ರತ್ನಗಿರಿ ಇಂಪೆಕ್ಸ್ ಪ್ರೈ.ಲಿ. ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕ ಶ್ರೀ ಎಸ್.ಎ.ವಾಸುದೇವ್ ಮೂರ್ತಿ ರವರಿಗೆ ಧನ್ಯವಾದಗಳನ್ನು ತಿಳಿಸುತ್ತೇನೆ ಎಂದರು.

**ಈ ವಿಷಯವನ್ನು ತಮ್ಮ ಮಾಧ್ಯಮದಲ್ಲಿ ಪ್ರಕಟಿಸಲು ಕೋರಿದೆ.**

**ಸಾರ್ವಜನಿಕ ಸಂಪರ್ಕಾಧಿಕಾರಿ**